ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1282(1339)
ಸದಸ್ಯರ ಹೆಸರು : ಶ್ರೀ ಪಾಟೀಲ್ ಎಸ್.ಎಸ್.(ಮುಂಡರಗಿ)
ಉತ್ತರಿಸಬೇಕಾಧ ಸಚಿವರು : ಶ್ರೀ ಜೆ.ಟಿ.ದೇವೇಗೌಡ
(ಸಹಕಾರ ಸಚಿವರು)

ಅ) ದಿನಾಂಕ 15.09.2003ರಂದು ಕೆಸಿಸಿ ಬ್ಯಾಂಕ್‌ಗೆ ಅನ್ವಯಿಸಿರುವ ವಿಶೇಷ ಬಡ್ಡಿ ಮನ್ನಾ ಯೋಜನೆಯ ವಿವರವೇನು?

ಸರ್ಕಾರವು ಕೆಸಿಸಿ ಬ್ಯಾಂಕ್, ಧಾರವಾಡ, ಇದರ ಪುನಶ್ಚೇತನಕ್ಕಾಗಿ ವಿಶೇಷ ಪ್ಯಾಕೇಜನ್ನು ದಿನಾಂಕ 30.06.2003ಕ್ಕೆ ಬಾಕಿ ಇದ್ದು, ದಿನಾಂಕ 31.03.2004ರೊಳಗಾಗಿ ಪಾವತಿಸಿದ ಅಲ್ಪಾವಧಿ, ಮಧ್ಯಮಾವಧಿ ಕೃಷಿ ಸುಸ್ತಿ ಸಾಲದ ಮೇಲಿನ ಪೂರ್ಣ ಬಡ್ಡಿಯನ್ನು ಮನ್ನಾ ಮಾಡಿದೆ. ಮನ್ನಾ ಮಾಡಲಾದ ಈ ಕೃಷಿ ಸಾಲದ ಮೇಲಿನ ಬಡ್ಡಿ ಮೊತ್ತವು ರೂ. 73.46 ಕೋಟಿ ಆಗಿರುತ್ತದೆ. ಸರ್ಕಾರವು ಹೊರಡಿಸಿರುವ ಆದೇಶದಲ್ಲಿ ಬಡ್ಡಿ ಮನ್ನಾ ಮಾಡಲಾದ ಬಾಬ್ತು ನಷ್ಟವನ್ನು ರೂ. 50.00 ಕೋಟಿಗೆ ಸೀಮಿತಗೊಳಿಸಿ, ಸರ್ಕಾರ, ಅಪೆಕ್ಸ್ ಬ್ಯಾಂಕ್ ಮತ್ತು ಕೆಸಿಸಿ ಬ್ಯಾಂಕ್ ನಿ. ಧಾರವಾಡ, ಅನುಕ್ರಮವಾಗಿ ಶೇ. 50:25:25 ಅನುಪಾತದಲ್ಲಿ ಭರಿಸತಕ್ಕದ್ದೆಂದು ಆದೇಶಿಸಲಾಗಿದೆ. ಇದರ ಪ್ರಕಾರ ಸರ್ಕಾರದ ಬದ್ಧತೆಯು ರೂ. 25.00 ಕೋಟಿ ಆಗಿದ್ದು, ಸರ್ಕಾರವು ಪೂರ್ಣ ರೂ. 25.00 ಕೋಟಿಯನ್ನು ಬಿಡುಗಡೆ ಮಾಡಿರುತ್ತದೆ.

ಆ) ಈ ಯೋಜನೆಯಿಂದ ಕೆಸಿಸಿ ಬ್ಯಾಂಕು ಮತ್ತಷ್ಟು ಹಾನಿಗೊಳಗಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ)ಬಂದಿದ್ದಲ್ಲಿ ಆ ಬಗ್ಗೆ ಸರ್ಕಾರದ ಕ್ರಮಗಳೇನು?(ವಿವರ ನೀಡುವುದು)

ಪ್ಯಾಕೇಜಿನಡಿಯಲ್ಲಿ ಕೆಸಿಸಿ ಬ್ಯಾಂಕ್ ನಿ. ಧಾರವಾಡ, ಇದರ ವಂತಿಗೆ ರೂ. 18.36 ಕೋಟಿಯಷ್ಟು ಬ್ಯಾಂಕಿನಿಂದ ಭರಿಸಿದ್ದು ಇದು ಬ್ಯಾಂಕಿಗೆ ಹಾನಿಯಾಗಿದೆ.

ಈ) ಕೆಸಸ ಬ್ಯಾಂಕ್ ಆಡಳಿತ ಮಂಡಳಿಯ ಚುನಾವಣೆ ಯಾವಾಗ ನಡೆಸಲಾಗುವುದು?

ಸರ್ಕಾರವು ಕೆಸಿಸಿ ಬ್ಯಾಂಕ್ ನಿ. ಧಾರವಾಡ, ಇದರ ಆಡಳಿತಗಾರರ ಅವಧಿಯನ್ನು 10.06.2007ರವರೆಗೆ ವಿಸ್ತರಿಸಲಾಗಿದೆ. ಬ್ಯಾಂಕಿನ ಪರಿಸ್ಥಿತಿ ಸುಧಾರಣೆಯಾದಲ್ಲಿ ಬ್ಯಾಂಕಿಗೆ ಚುನಾವಣೆ ನಡೆಸಲು ಕ್ರಮವಿಡಲಾಗುವುದು.